ಸೆಲೆಬ್ರಿಟಿ
■ ಹನಿ

# ಶಾದಿ ನಂಬರ್ 3

'ನನಗೆ ಆಶ್ಚರ್ಯವಾಗುತ್ತಿದೆ, ನಾನೇನಾದರೂ ಬ್ಯಾಂಕ್ ಲೂಟಿ ಮಾಡಿದ್ದೀನಾ? ಅಥವಾ ದೇಶದ ಸಂಪತ್ತು ಕೊಳ್ಳೆಹೊಡೆದು ಹಣ ಡಬಲ್ ಮಾಡಿದ್ದೀನಾ? ನರಮೇಧ ಮಾಡಿದ್ದೀನಾ? ಹೋಗಲಿ, ಭಾರತಕ್ಕೆ ದೇಶದ ರಹಸ್ಯಗಳನ್ನು ಮಾರಿದ್ದೀನಾ? ಇದ್ಯಾವುದನ್ನೂ ಮಾಡಿಲ್ಲ– ಇದಕ್ಕಿಂತ ದೊಡ್ಡ ಕ್ರೈಮ್ ಮಾಡಿದಂತೆ ನನ್ನನ್ನು ಟೀಕಿಸುತ್ತಿದ್ದಾರೆ. ನಾನು ಮದುವೆಯಾಗಲು ಬಯಸಿದ್ದೇ ತಪ್ಪಾ..?'

–ಪಾಕಿಸ್ತಾನ ಕ್ರಿಕೆಟ್‌ನ ಮಾಜಿ ಕ್ಯಾಪ್ಟನ್, ಹಾಲಿ ರಾಜಕಾರಣಿ ಇಮ್ರಾನ್ ಖಾನ್ ಮಾಡಿರುವ ಟ್ವೀಟ್ ಇದು. ಪಾಕ್‌ಪಟ್ಟಣ್‌ನ ಸೂಫಿ, ಶ್ರದ್ಧಾ ಚಿಕಿತ್ಸಕಿ ಬುಶ್ರಾ ಮನೇಕಾ ರನ್ನು ಮದುವೆಯಾಗಲು ಇಚ್ಛಿಸಿರುವ ಇಮ್ರಾನ್‌ಖಾನ್ ವಿರುದ್ಧ ಅಲ್ಲಿನ ರಾಜಕಾರಣಿಗಳು ಮುಗಿಬಿದ್ದು ಟೀಕಿಸುತ್ತಿರುವ ಹಿನ್ನೆಲೆಯಲ್ಲಿ ಇಮ್ರಾನ್ ಪ್ರತಿಕ್ರಿಯೆ ಇದು.

ಮದುವೆಯಾಗುವುದು ತಪ್ಪು ಎಂದು ಯಾರಾದರೂ ಏಕೆ ಹೇಳುತ್ತಾರೆ? ಆದರೆ ಇಬ್ಬರು ಪತ್ನಿಯರನ್ನು ತಲಾಖ್ ಕೊಟ್ಟು ಬಿಟ್ಟ ಬಳಿಕ, ಈಗ ಈ 65ರ ಇಳಿವಯಸ್ಸಿನಲ್ಲಿ ಮತ್ತೊಂದು ಮದುವೆ ಆಗಲು ಹೊರಟಿದ್ದೀಯಲ್ಲಾ.. ನಿನ್ನ ನೈಜ ಉದ್ದೇಶವೇನು ಎಂದು ನಾವು ಪ್ರಶ್ನಿಸುತ್ತಿದ್ದೇವೆ– ಎನ್ನುತ್ತಿದ್ದಾರೆ ಇಮ್ರಾನ್ ವಿರೋಧಿಗಳು. ಒಟ್ಟಾರೆ ಪಾಕಿಸ್ತಾನದಲ್ಲಿ 'ಪ್ರತಿದಿನ ಜನರು ಚರ್ಚಿಸುತ್ತಿರುವ ದೇಶದ ಜ್ವಲಂತ ಸಮಸ್ಯೆ ಇಮ್ರಾನ್ ಖಾನ್ ಮದುವೆ' ಎಂಬಂತಾಗಿದೆ.

ಇಮ್ರಾನ್‌ಖಾನ್ ಈ ವಯಸ್ಸಿನಲ್ಲೂ ಸ್ಫುರದ್ರೂಪಿ ತರುಣನಂತೆಯೇ ಮಿಂಚುತ್ತಿದ್ದಾನೆ. 1.85 ಮೀಟರ್ ಎತ್ತರದ ಈ ಅಜಾನುಬಾಹು ಪಠಾಣ 'ಹೂಂ' ಎಂದರೆ ಈಗಲೂ ಈತನಿಗೆ ಮದುವೆಯಾಗಲು 25ರ ಹರೆಯದ ತರುಣಿಯರು ಸಿಗುವುದು ಕಷ್ಟವಲ್ಲ. ಪಾಕಿಸ್ತಾನೀಯರು ಇಮ್ರಾನ್‌ನನ್ನು ಎಷ್ಟು ಪ್ರೀತಿಸುತ್ತಿದ್ದಾರೆ ಎಂದರೆ ಈಗಲೂ 'ಕ್ಯಾಪ್ಟನ್' ಎಂದೇ ಕರೆಯುತ್ತಾರೆ. 1992ರಲ್ಲಿ ಇಮ್ರಾನ್ ನಾಯಕತ್ವದಲ್ಲಿ ಗೆದ್ದ ಒಂದೇ ಒಂದು ವಿಶ್ವಕಪ್ ಅವರ ಮನಮಸ್ತಿಷ್ಕದಲ್ಲಿ ಇನ್ನೂ ಫ್ರಿಜ್‌ನಲ್ಲಿರುವ ಐಸ್‌ಕ್ರೀಮ್‌ನಂತೆ ಉಳಿದುಕೊಂಡಿದೆ.

ಒಂದು ಕಾಲದಲ್ಲಿ 'ಪ್ಲೇಬಾಯ್' ಆಗಿ ಜಗತ್ತಿನಾದ್ಯಂತ ಸುಂದರಿಯರ ಜತೆ ತಿರುಗಾಡುತ್ತಿದ್ದ ಇಮ್ರಾನ್‌ಗೆ ಶಾಕ್ ಕೊಟ್ಟದ್ದು ಅಮ್ಮನ ಮರಣ. ಅಮ್ಮ ಮರಣಿಸಿದ ಬಳಿಕ ಜವಾಬ್ದಾರಿ ಅರಿತುಕೊಂಡಂತೆ ಬದಲಾದ ಆತ, ಆಕೆಯ ಸ್ಮರಣೆಗಾಗಿ, ಬಡರೋಗಿಗಳಿಗೆ ನೆರವಾಗುವ ಇಡೀ ಪಾಕಿಸ್ತಾನದಲ್ಲೇ ಅತ್ಯುತ್ತಮ ಎನ್ನಬಹುದಾದ ಕ್ಯಾನ್ಸರ್ ಆಸ್ಪತ್ರೆಯೊಂದನ್ನು ಕಟ್ಟಿ ಬೆಳೆಸಿದ. ಅದಾದ ಬಳಿಕ ರಾಜಕೀಯಕ್ಕೆ ಧುಮುಕಿದ. ಪಾಕಿಸ್ತಾನ್ ತೆಹ್ರಿಕ್ ಎ ಇನ್ಸಾಫ್ (ಪಿಟಿಐ) ಎಂಬ ಪಕ್ಷ ಕಟ್ಟಿ ಅದನ್ನು ಸದೃಢವಾಗಿ ಬೆಳೆಸಿದ. ರಾಜಕೀಯದ ಮಧ್ಯೆಯೇ 1995ರಲ್ಲಿ ಲಂಡನ್ನಿನ ಮಾಡೆಲಿಂಗ್ ಬೆಡಗಿ ಜೆಮಿಮಾಳನ್ನು ಮದುವೆಯಾಗಿ ಸಾಂಪ್ರದಾಯಕ ಮನಸ್ಸಿನ ಅಭಿಮಾನಿಗಳ ಪ್ರತಿರೋಧವನ್ನೂ ಎದುರಿಸಿ ಗೆದ್ದಾತ ಇಮ್ರಾನ್. 9 ವರ್ಷಗಳ ಸಂಸಾರ ಮತ್ತು ಇಬ್ಬರ ಮಕ್ಕಳ ಬಳಿಕ ಅದೇನಾಯಿತೋ, ಜೆಮಿಮಾಳಿಗೆ ತಲಾಖ್ ನೀಡಿದ. ಬಳಿಕ 10 ವರ್ಷಗಳ ಕಾಲ ಪಕ್ಷದ ಕೆಲಸದಲ್ಲೇ ಮುಳುಗಿಹೋದ. ಆ ಬಳಿಕ ಟಿವಿ ನಿರೂಪಕಿ, ಅತಿಶಯ ಸುಂದರಿ ರೆಹಮ್ ಖಾನ್ ಜತೆಗೆ ಎರಡನೇ ಮದುವೆ ಆಯಿತು. ಆದರೆ ಹತ್ತೇ ತಿಂಗಳಲ್ಲಿ ಈ ಮದುವೆಯನ್ನು ಮುರಿದುಕೊಂಡ. ಈಗ ಬುಶ್ರಾ ಮನೇಕಾ ಮುಂದೆ ಮೂರನೇ ಮದುವೆಯ ಪ್ರಸ್ತಾಪ ಇಟ್ಟಿದ್ದಾನೆ.

ಬುಶ್ರಾ ಮೆನಕಾ, ಪಾಕ್‌ಪಟ್ಟಣ್‌ನಲ್ಲಿ ಅತ್ಯಂತ ಜನಪ್ರಿಯ ಶ್ರದ್ಧಾ ಚಿಕಿತ್ಸಕಿ. ಖುರಾನ್‌ನ ಸೂಕ್ತಿಗಳನ್ನು ಓದಿ ಈಕೆ ಊದಿದರೆ ಎಂತಹ ರೋಗಗಳೂ ಗುಣವಾಗುತ್ತವೆ ಎಂಬುದು ಪ್ರತೀತಿ. ಪಂಜಾಬಿನ ಹೆಸರಾಂತ ಸೂಫಿ ಸಂತ ಬಾಬಾ ಫರೀದ್‌ರ ದರ್ಗಾ ಇರುವ ನಗರವದು. ಪಂಜಾಬಿನ ಸಿಕ್ಖರಿಗೂ ಈ ಸಂತನ ಮೇಲೆ ಅಪಾರ ಭಕ್ತಿ. ಪಾಕಿಸ್ತಾನದಲ್ಲಿ ಅತ್ಯಂತ ಜನಪ್ರಿಯವಾಗಿರುವ ವಟ್ಟೂ ವಂಶಸ್ಥೆ ಈಕೆ. ಪಿಂಕಿ ಬೀಬಿ ಎಂದೇ ಜನಪ್ರಿಯಳಾಗಿರುವ ಬುಶ್ರಾಗೀಗ 40ರ ವಯಸ್ಸು. ಐದು ಮಕ್ಕಳ ತಾಯಿ. ಈಕೆಯನ್ನು ತನ್ನ ಆಧ್ಯಾತ್ಮಿಕ ಗುರು ಎಂದು ಭಾವಿಸಿರುವ ಇಮ್ರಾನ್ ಆಗಾಗ್ಗೆ ಬಂದು ಭೇಟಿಯಾಗುತ್ತಿದ್ದ. ಪ್ರತಿ ಭೇಟಿಯಲ್ಲೂ ಆಕೆ ಪರ್ದಾ ಧರಿಸಿಯೇ ಇದ್ದಳಂತೆ. ಆಕೆಯ ಕುಟುಂಬದ ಸದಸ್ಯರಿಗೂ ಇಮ್ರಾನ್ ಪರಿಚಿತನಾಗಿದ್ದ.

ಬುಶ್ರಾಳ ಗಂಡ ಖವರ್ ಫರೀದ್ ಮನೇಕಾ, ಪಾಕ್ ಸರ್ಕಾರದಲ್ಲಿ ಕಸ್ಟಮ್ಸ್ ಅಧಿಕಾರಿ. ಖವರ್‌ನ ತಂದೆ ಬೆನಜೀರ್ ಭುಟ್ಟೋ ಸರ್ಕಾರದಲ್ಲಿ ಮಂತ್ರಿ ಆಗಿದ್ದಾತ. 'ನನ್ನ ಕನಸಿನಲ್ಲಿ ಪ್ರವಾದಿಯವರೇ ಬಂದು ಇಮ್ರಾನ್ ಖಾನ್‌ನನ್ನು ಮದುವೆಯಾಗು, ದೇಶಕ್ಕೆ ಒಳ್ಳೆಯದಾಗುತ್ತದೆ ಎಂದಿದ್ದಾರೆ' ಎಂದು ಬುಶ್ರಾ ಗಂಡನಿಗೆ ಹೇಳಿದ ಬಳಿಕ ಆತನೂ ಅದನ್ನು ನಂಬಿದ್ದಾನೆ. ಪತ್ನಿಯ ಬಯಕೆಯಂತೆ ಆಕೆಗೆ ತಲಾಖ್ ಕೊಟ್ಟಿದ್ದಾನೆ. ಅದಾಗಿ ಕೆಲವು ತಿಂಗಳ ಬಳಿಕ ಈಗ 'ನಾನು ಆಕೆಯನ್ನು ಮದುವೆಯಾಗುವ ಪ್ರಸ್ತಾಪ ಮುಂದಿಟ್ಟಿದ್ದೇನೆ' ಎಂದು ಇಮ್ರಾನ್ ಪ್ರಕಟಿಸಿದ್ದಾನೆ.

ಪಾಕ್ ಮಾಧ್ಯಮದವರು ಇಮ್ರಾನ್ ಹೇಳಿಕೆಯನ್ನು ನಂಬುತ್ತಿಲ್ಲ. 'ಜನವರಿ 1ರಂದೇ ಇಮ್ರಾನ್‌ನ ಮೂರನೇ ಮದುವೆಯಾಗಿದೆ. ಆತನ ಪಕ್ಷದ ಕೋರ್ ಕಮಿಟಿ ಸದಸ್ಯ ಮುಫ್ತಿ ಸಯೀದ್ ನಿಖಾ ಮಾಡಿಕೊಟ್ಟಿದ್ದಾರೆ. ಈ ಹಿಂದೆ ರೆಹಮ್ ಖಾನ್ ಜತೆಗಿನ ನಿಖಾಹ್‌ಅನ್ನೂ ಈ ಮುಫ್ತಿಯೇ ನೆರವೇರಿಸಿದ್ದು' ಎಂದು ಅಲ್ಲಿನ ಪತ್ರಿಕೆಗಳಲ್ಲಿ ಟಾಂ ಟಾಂ ಆಗಿದೆ. ಕೆಲವರ ಪ್ರಕಾರ, 'ಇತ್ತೀಚೆಗೆ ಇಮ್ರಾನ್, ಪೀರ್ ಬಾಬಾಗಳನ್ನು ಹೆಚ್ಚು ನಂಬುತ್ತಿದ್ದಾನೆ. ತನ್ನನ್ನು ಮದುವೆಯಾದರೆ ಪಾಕಿಸ್ತಾನದ ಪ್ರಧಾನಿಯಾಗುವ ಭಾಗ್ಯ ಬರಲಿದೆ ಎಂದು ಸ್ವತಃ ಬುಶ್ರಾ ಭವಿಷ್ಯ ನುಡಿದಿದ್ದಾಳೆ. ಹಾಗೆಂದೇ ಗುಟ್ಟಾಗಿ ಈ ಮದುವೆಯಾಗಿದೆ!' ಮದುವೆಯ ಕುರಿತ ಸತ್ಯ ಏನೋ ಯಾರಿಗೆ ಗೊತ್ತು! ಆದರೆ ಈ ವರ್ಷದ ಜುಲೈನಲ್ಲಿ ಪಾಕಿಸ್ತಾನ ಸಂಸತ್ತಿನ ಮಹಾಚುನಾವಣೆ ನಡೆಯಲಿದೆ. ಪ್ರಧಾನಿ ಗದ್ದುಗೆಯ ಮೇಲೆ ಇಮ್ರಾನ್ ಒಂದು ಕಣ್ಣಿಟ್ಟಿದ್ದಾನೆ ಎನ್ನುವುದಂತೂ ಸತ್ಯ. ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65